OS No. 28/2010
ಡಿ ಡಬ್ಲೂ 2

ದಿಃ 11.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಕೆ ವಿ ವಕೀಲರಿಂದಃ

ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸ ರ. ನನ್ನ ತಂದೆನಿ ಮರಣ ಹೊಂದಿದ ನಂತರ ನನ್ನ ತಾಯಿ ಹೆಸರಿಗೆ ಪೌತಿ ಆಧಾರದ ಮೇಲೆ ಖಾತೆ ವರ್ಗಾವಣೆಯಾಗಿರುತ್ತದೆರಂದೆ ಸರಿ. ನಾನು 2 ಮತ್ತು 4 ನೇ ಪ್ರತಿವಾದಿ ಮತ್ತು ವಾದಿ 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾನು ಸೇರಿದಂತೆ ಎಲ್ಲರೂ ಸಮಾನ ಭಾಗ ಪಡೆಯಲು ನನ್ನ ಯಾವುದೆ ತಕರಾರು ಇಲ್ಲ.

ನಾನು ಪ್ರತಿವಾದಿಯರೊಂದಿಗೆ ವಿಶ್ವಾಸದಿಂದ ಇದ್ದೇನೆ. ನಾನು ದ್ವಿತಿಯಾ ಪಿಯುಸಿ ಓದಿರುತ್ತೇನೆ. ನಿಪಿ 2 ನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಸರಿ ಇದೆ ಎಂದು ಉತ್ತರಿಸುತ್ತಾರೆ. ನಾನು ಸಲ್ಲಿಸಿರುವ ತಕರಾರನ್ನು ತಿಳಿದುಕೊಂಡಿರುತ್ತೇನೆ. ಸ.ನಂ. 29/1 ರಲ್ಲಿ 1 ಎಕರೆ 5 ಗುಂಟೆ ದೇವಲಾಪುರ , ನಾಗಮಂಗಲದಲ್ಲಿರುವ ಸ್ವತ್ತು ನಮ್ಮ ತಂದೆಯ ಪಿತ್ರಾರ್ಜಿತ ಸ್ವತ್ತಾಗಿರುತ್ತದೆಂದರೆ ಸರಿ. ಸದರಿ ಸ್ವತ್ತನ್ನು ಈ ದಾವೆಗೆ ಸೇರ್ಪಡೆ ಮಾಡಲು ನನ್ನ ಯಾವುದೆ ತಕರಾರು ಇಲ್ಲ. 1 ನೇ ಪ್ರತಿವಾದಿಯ ಒಡವೆಗಳನ್ನು ಗ್ರಾಮಾಂತರ ಬ್ಯಾಂಕ್ ನಲ್ಲಿ ಅಡ ಇಟ್ಟಿರುವ ಕುರಿತು ನನ್ನ ಬಳಿಯಾವುದೆ ದಾಖಲಾತಿ ಇಲ್ಲ. ಸಾಕ್ಷಿಗೆ ನಿಡಿ 1 ರ ದಾಖಲಾತಿಯಾದ ಸ.ನಂ. 29/1 ರ 2025-26 ರ ಪಹಣಿಯನ್ನು ತೋರಿಸಿ ಕೇಳಲಾಗಿ ಒಪ್ಪಿಕೊಂಡಿರುತ್ತಾರೆ. ನನ್ನ ಅಣ್ಣನ ಹೆಂಡತಿ ತನ್ನ ಒಡವೆಗಳನ್ನು ನನ್ನ ತಾಯಿಯ ಕೈಯಲ್ಲಿ ಕೊಟ್ಟು ಹೋಗಿರುತ್ತಾರೆ ಅದನ್ನು ನಾನು ಕಣ್ಣಾರೆ ನೋಡಿರುತ್ತೇನೆ. 2 ನೇ ಪ್ರತಿವಾದಿಯ ಹೆಂಡತಿಯ ಒಡವೆಗಳನ್ನು ನಾನು ನೋಡಿರುತ್ತೇನೆ. ಸದರಿ ಒಡವೆಗಳು ಅವರ ತವರು ಮನೆಯವರು ಅವರಿಗೆ ನೀಡಿದ್ದ ಒಡವೆಗಳಾಗಿರುತ್ತದೆ. ಆ ಕುರಿತು ನಾನು ರಶೀದಿಗಳನ್ನು ನೋಡಿರುವುದಿಲ್ಲ. ನನ್ನ ಅಣ್ಣನ ಹೆಂಡತಿಯ ಒಡವೆಗಳನ್ನು ಬ್ಯಾಂಕ್ ಗೆ 1 ನೇ ಪ್ರತಿವಾದಿಯು ಅಡ ಇಟ್ಟಿರುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದೆ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಸಾ ಓ ಹೇ ಕೇ ಸ ಇ ಒ

(ಶ್ರೀಮತಿ ಮಮತ.ಪಿ.)
ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅರಸೀಕೆರೆ.